## ಯಾರು?

ಗಂಡ ಹೆಂಡತಿಯ ಮೊಬೈಲಿಗೆ ಫೋನ್ ಮಾಡಿದ:
'ನಾನು ಆಸ್ಪತ್ರೆಯಲ್ಲಿದ್ದೇನೆ. ನಾನು ಬರುವಾಗ ದೊಡ್ಡ ಲಾರಿ ಹೊಡೆದು ಅಪಘಾತ ಆಯಿತು. ನಾನು ಲಾರಿ ಅಡಿ ಹೋಗಿಬಿಟ್ಟಿದ್ದೆ. ಏನೋ ನಿನ್ನ ಪುಣ್ಯ ಒಳ್ಳೆಯದಿತ್ತು; ಶೀಲಾ ನನ್ನನ್ನು ಆಸ್ಪತ್ರೆಗೆ ಸೇರಿಸಿದಳು. ಹೆಲ್ಮೆಟ್ ಇದ್ದುದರಿಂದ ನಾನು ಬದುಕಿದೆ. ಕಾಲು ಮೂರು ಕಡೆ ಮುರಿದಿದೆ. ಬೆನ್ನು ಚರ್ಮ ಕಿತ್ತು ಗಾಯ ಆಗಿದೆ. ಎಡ ಕೈ ಮುರಿದಿದೆ. ಡಾಕ್ಟರ್ ಆಪರೇಷನ್ ಮಾಡಿದ್ದಾರೆ. ಈಗ ವಾರ್ಡಿಗೆ ಹಾಕಿದ್ದಾರೆ. ಜೀವಕ್ಕೆ ಅಪಾಯ ಇಲ್ಲ ಅಂತೆ...'
ಹೆಂಡತಿ ತಕ್ಷಣ ಕೇಳಿದಳು, 'ಶೀಲಾ ಯಾರು?'

**ತೈರೊಳ್ಳಿ ಮಂಜುನಾಥ ಉಡುಪ**





## ಪರಿಚಯ

ಮಲ್ಲೇಶಿ ತನ್ನ ಗೆಳೆಯ ಸೋಮುವಿನೊಂದಿಗೆ ಹೋಗುತ್ತಿರುವಾಗ ಅವನ ಗೆಳೆಯ ರಾಮು ಎದುರಾದ. ಸೋಮು, 'ನಾನು ಮುಂದಕ್ಕೆ ಹೋಗುತ್ತೇನೆ' ಎಂದು ಗೆಳೆಯ ಮಲ್ಲೇಶಿಗೆ ಹೇಳಿ ಹೊರಟು ಹೋದ. ಆತ ಹೋದ ಬಳಿಕ ಮಲ್ಲೇಶಿ, 'ಈಗ ಹೋದನಲ್ಲ ಆತ ನನ್ನ ಸಹೋದ್ಯೋಗಿ ಸೋಮು. ತುಂಬಾ ಒಳ್ಳೆಯ ಮನುಷ್ಯ. ಒಂದೇ ಒಂದು ಸುಳ್ಳು ಹೇಳುವುದಿಲ್ಲ' ಎಂದು ಅವನ ಪರಿಚಯ ಮಾಡಿಕೊಟ್ಟ. ಆಗ ರಾಮು, 'ಹೌದಾ! ಈ ಕಾಲದಲ್ಲೂ ಇಂಥವರು ಇದ್ದಾರಾ?...' ಎಂದು ಆಶ್ಚರ್ಯಚಕಿತನಾಗಿ ಪ್ರಶ್ನಿಸಿದ. ಮಲ್ಲೇಶಿ ಅವನ ಮಾತನ್ನು ನಡುವೆಯೇ ತಡೆದು, 'ಆದರೆ ಆತ ಹೆಂಡತಿಯ ಬಳಿ ಒಂದೇ ಒಂದು ನಿಜವನ್ನು ಹೇಳುವುದಿಲ್ಲ' ಎಂದಾಗ ರಾಮು ಬೆಪ್ಪನಂತೆ ಅವನ ಮುಖ ನೋಡುತ್ತ ನಿಂತ!

**ದೇವಿದಾಸ ಸುವರ್ಣ**